ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಬೇಡಿಕೆ ಮತ್ತು ಅಗತ್ಯಕ್ಕೆ ತಕ್ಕಂತೆ ಇಡೀ ರಾಜ್ಯದ ಎಲ್ಲಾ ಹಾಸ್ಟೆಲ್‌ಗಳಲ್ಲಿ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಆದರಲ್ಲೂ ಮಾನ್ಯ ಗೌರವಾನ್ವಿತ ಸದಸ್ಯರ ಕ್ಷೇತ್ರದಲ್ಲಿ ಎಲ್ಲಾ ಕ್ಷೇತ್ರಗಳಿಗಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶವನ್ನು ಕಲ್ಪಿಸಲಾಗಿದೆ. ಬಹಳಷ್ಟು ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡ ಇಲ್ಲದೆ ಬಾಡಿಗೆ ಕಟ್ಟಡಗಳಲ್ಲಿ ನಡೆಸುತ್ತಿರುವುದರಿಂದ ಸ್ಥಳಾವಕಾಶದ ಅಭಾವದ ಸಮಸ್ಯೆ ಇರುವುದರಿಂದ ಸರ್ಕಾರ ಬಹಳ ಇಕ್ಕಟ್ಟಿಗೆ ಸಿಲುಕಿದೆ. ಆದರೂ ಸಹ ಪ್ರತಿಯೊಂದು ಹಾಸ್ಟೆಲ್‌ನಲ್ಲಿ 25 ಹುಡುಗರ ಸಂಖ್ಯೆಯನ್ನು ಹೆಚ್ಚು ಮಾಡಲಾಗಿದೆ. ಇನ್ನೂ ಬೇಡಿಕೆ ಇದ್ದರೆ, ಅದನ್ನು ಪರಿಶೀಲಿಸಲಾಗುವುದು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಹಾಸ್ಟೆಲ್‌ಗಳಿಗೆ ಕಟ್ಟಡದ ಕೊರತೆ ಇದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ನಾನು ಹೇಳಿರುವ ಬಾಯ್ಸ್ ಹಾಸ್ಟೆಲ್ ಬಿಲ್ಡಿಂಗ್‌ನಲ್ಲಿ ಫಸ್ಟ್ ಫ್ಲೋರ್ ಹಾಗೇ ಖಾಲಿ ಇದೆ. ಈ ಫ್ಲೋರ್‌ನಲ್ಲಿ 10 ಕೊಠಡಿಗಳು ಖಾಲಿ ಇವೆ, ಮತ್ತು ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲೂ 6 ಕೊಠಡಿಗಳು ಖಾಲಿ ಇವೆ, ಅದನ್ನು ಸಂಬಂಧಪಟ್ಟ ಅಧಿಕಾರಿಗಳು ಬಂದು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಅದನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು:- ಶ್ರೀ ಕೆ. ಜಯರಾಮ ಶೆಟ್ಟರ ಚುಕ್ಕೆ ಗುರುತಿನ 287 (1754) ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಲು ಸಮಯ ಕೇಳಿದ್ದಾರೆ.

ವಿಷಯ:- ಧಾರಾವಾಡ ರೈಲ್ವೇ ನಿಲ್ದಾಣದ ಬಳಿ ರೈಲ್ವೇ ಕ್ರಾಸ್ ಬಂದ್.

283 (1747) **ಶ್ರೀ ಚಂದ್ರಕಾಂತ ಬೆಲ್ಲದ(ಧಾರವಾಡ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ರೈಲ್ವೇ ಸ್ಟೇಷನ್ ಹತ್ತಿರ ಬ್ರಾಡ್‌ಗೇಜ್ ಬದಲಾವಣೆ ಕಾರ್ಯದಿಂದ ರೈಲ್ವೇ ಕ್ರಾಸ್ ಬಂದ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಅದರಿಂದ ಸುತ್ತಲಿನ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಧಾರವಾಡ ಮಹಾನಗರ ಸಭೆಯವರು 'ಓವರ್ ಬ್ರಿಡ್ಜ್' (ರೈಲ್ವೇ ಮಾರ್ಗದ ಮೇಲಿನ ರಸ್ತೆ) ಅಗತ್ಯವಿದೆಯೆಂದು ರೈಲ್ವೇ ಇಲಾಖೆಯವರಿಂದ ಎಸ್ಟಿಮೇಟ್ ಮಾಡಿಕೊಟ್ಟಿರುವುದು ಸರಿಯೆ? ಹಾಗಾದರೆ ಅದರ ಮೊತ್ತವೆಷ್ಟು?

ಈ) ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಹೋಗಲು ಹಾಗೂ ಬೆಳೆದಿರುವ ಮಹಾನಗರ ಅವಶ್ಯಕತೆಯಿಂದ ಈ ರೈಲ್ವೇ ಬ್ರಿಡ್ಜ್ ಅವಶ್ಯಕತೆ ಇರುವುದರಿಂದ ರಚಿಸಿ ಕೊಡಲಾಗುವುದೇ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಬಂದಿದೆ.

ಆ) ಬಂದಿದೆ.

ಇ) 'ಓವರ್ ಬ್ರಿಡ್ಜ್' ನಿರ್ಮಾಣದ ಬಗ್ಗೆ ರೈಲ್ವೇ ಇಲಾಖೆಯಿಂದ ಅಂದಾಜು ಪತ್ರಿಕೆ (ಎಸ್ಟಿಮೇಟ್) ಬರಬೇಕಾಗಿದೆ.

ಈ) ಮಹಾನಗರ ಸಭೆಯು ಓವರ್ ಬ್ರಿಡ್ಜ್ ನಿರ್ಮಾಣದ ಪೂರ್ಣ ವೆಚ್ಚದ ಅರ್ಧಪಾಲು ವಹಿಸಲು ಈಗಾಗಲೇ ಒಪ್ಪಿಗೆ ಕೊಟ್ಟಿದೆ. ಇನ್ನುಳಿದ ಅರ್ಧ ವೆಚ್ಚ ರೈಲ್ವೇ ಇಲಾಖೆಯವರು ವಹಿಸಲು ಒಪ್ಪಿಗೆ ಕೊಟ್ಟಿದಲ್ಲಿ ಓವರ್ ಬ್ರಿಡ್ಜ್ ರಚಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಚಂದ್ರಕಾಂತ ಬೆಲ್ಲದ್:- ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಹೋಗುವ ಒಂದು ಮಾರ್ಗದಲ್ಲಿ ರೈಲ್ವೇ ಸ್ಟೇಷನ್ ಹತ್ತಿರ ಒಂದು ಓವರ್ ಬ್ರಿಡ್ಜ್ ಆಗಬೇಕೆಂದು ಬಹಳ ದಿನಗಳಿಂದ ಬೇಡಿಕೆ ಇದೆ. ಇತ್ತೀಚೆಗೆ ಬ್ರಾಡ್ ಗೇಜ್ ಆಗುತ್ತಿರುವುದರಿಂದ ಅಲ್ಲಿ ಗೇಟ್ ಸಹಿತ ಬಂದ್ ಮಾಡಿದ್ದಾರೆ. ಈ ಗೇಟ್ ಬಂದ್ ಮಾಡಿರುವುದರಿಂದ ಅತಿ ಶೀಘ್ರದಲ್ಲೇ ಓವರ್ ಬ್ರಿಡ್ಜ್ ಮಾಡಬೇಕಾಗಿದೆ. ಬರೀ ವಿಶ್ವವಿದ್ಯಾನಿಲಯವಲ್ಲದೆ ಕಲ್ಯಾಣ ನಗರ, ಕಾನೂನು ನಗರ, ತೇಜಸ್ವಿ ನಗರ ಹಾಗೂ ಇನ್ನೂ ಅನೇಕ ಬಡಾವಣೆಗಳು ಆ ಭಾಗದಲ್ಲಿ ಬೆಳೆದಿವೆ. ಈ ಬ್ರಿಡ್ಜ್ ಮಾಡಲು ರೈಲ್ವೇಯವರು 50 ಪರ್‌ಸೆಂಟ್ ಹಣ ಕೊಟ್ಟರೆ ನಾವು 50 ಪರ್‌ಸೆಂಟ್ ಕೊಡುತ್ತೇವೆಂದು ಮಹಾನಗರ ಸಭೆಯವರು ಒಪ್ಪಿಗೆ ಕೊಟ್ಟಿದ್ದಾರೆ. ಈಗಾಗಲೇ ಎಸ್ಟಿಮೇಟ್ ರೆಡಿ ಇರುವುದರಿಂದ ಈ 50 ಪರ್‌ಸೆಂಟ್ ಹಣವನ್ನು ಮಹಾನಗರ ಸಭೆಯವರಿಗೆ ಸರ್ಕಾರ ಯಾವಾಗ ಬಿಡುಗಡೆ ಮಾಡುತ್ತದೆಂದು ಹೇಳಬೇಕು. 50 ಪರ್‌ಸೆಂಟ್ ಹಣವನ್ನು ಬಿಡುಗಡೆ ಮಾಡಿದರೆ ಆ ಕೆಲಸ ಪ್ರಾರಂಭವಾಗುತ್ತದೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಮಾನ್ಯ ಅಧ್ಯಕ್ಷರೆ, ಈ ಬ್ರಿಡ್ಜನ್ನು ಕಟ್ಟಲು ಆಗುವ ಖರ್ಚಿನಲ್ಲಿ 50 ಪರ್‌ಸೆಂಟ್ ಕೊಡುತ್ತೇವೆಂದು ಅಲ್ಲಿನ ಕಾರ್ಪೊರೇಷನ್‌ನವರು ಒಪ್ಪಿಕೊಂಡಿದ್ದಾರೆ. ಇದರ ಎಸ್ಟಿಮೇಟ್ ತಯಾರು ಮಾಡುವ ಜವಾಬ್ದಾರಿ ರೈಲ್ವೇಯವರಿಗೆ ಇರುತ್ತದೆ. ರೈಲ್ವೇಯವರು ತಮ್ಮ ವಿಲ್ಲಿಂಗ್‌ನೆಸ್‌ನ್ನು ಕಾರ್ಪೊರೇಷನ್‌ಗೆ ಸಬ್‌ಮಿಟ್ ಮಾಡಿಲ್ಲದೆ ಇರುವುದರಿಂದ ಆ ಕೆಲಸ ಹಾಗೆಯೇ ನಿಂತಿದೆ. ಇದರಲ್ಲಿ ನಮ್ಮ ವರ್ಕ್ ಇದೆ ಎಂದು ಒಂದು ಇಂಟಿಮೇಷನ್‌ನ್ನು ಕಾರ್ಪೊರೇಷನ್‌ನವರಿಗೆ ಕೊಟ್ಟರೆ ಕೂಡಲೇ ನಾವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಚಂದ್ರಕಾಂತ ಬೆಲ್ಲದ:- ಈಗಾಗಲೇ ಕಾರ್ಪೊರೇಷನ್ ಮತ್ತು ರೈಲ್ವೇ ಇಲಾಖೆಯ ತಜ್ಞ ಇಂಜಿನೀಯರ್‌ಗಳಿಂದ ಎಸ್ಟಿಮೇಟ್ ಮಾಡಿ ರೆಡಿ ಇದೆ. ಕಾರ್ಪೊರೇಷನ್‌ನವರಿಂದ ಹಣವನ್ನು ರೈಲ್ವೇಯವರಿಗೆ ಕೊಟ್ಟು ಬಿಟ್ಟರೆ ಕೂಡಲೇ ಕೆಲಸವು ಪ್ರಾರಂಭವಾಗುತ್ತದೆ. ತಾವುಗಳು ಯಾವಾಗ ಹಣವನ್ನು ಕೊಡುತ್ತೀರಿ ಎಂಬುದನ್ನು ನಾನು ಕೇಳಬಯಸುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಕಾರ್ಪೊರೇಷನ್‌ನವರು ಏನು ಡಿಸಿಷನ್ ತೆಗೆದುಕೊಂಡಿದ್ದಾರೆ ಅಂದರೆ, ಟೋಟಲ್ ಎಸ್ಟಿಮೇಟ್ ಏನಾಗುತ್ತದೆ ಆದರಲ್ಲಿ ಅರ್ಧ ಭಾಗದಷ್ಟು ಕೊಡಲು ಸಮ್ಮತಿ ಇದೆ ಆದರೆ, ರೈಲ್ವೇ ಡಿಪಾರ್ಟಮೆಂಟ್‌ನವರು ಎಸ್ಟಿಮೇಟನ್ನು ಹಾಗೂ 50 ಪರ್‌ಸೆಂಟ್‌ನಷ್ಟು ಹಣವನ್ನು ತಾವು ಕೊಡುತ್ತೇವೆ ಎಂಬ ಬಗ್ಗೆ ಸೂಚನೆಯನ್ನು ಕೂಡ ಇನ್ನೂ ಕೊಟ್ಟಿಲ್ಲ. ಅದು ಬಂದ ಮೇಲೆ ನಾವು ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಕ್ರಮವನ್ನು ಜರುಗಿಸುತ್ತೇವೆ. ನಾವು ಇಷ್ಟು ಹಣ ಕೊಡಲು ಸಿದ್ಧರಿದ್ದೇವೆಂದು ರೈಲ್ವೇ ಡಿಪಾರ್ಟ್‌ಮೆಂಟ್‌ನವರಿಗೆ ತಿಳಿಸಿದ್ದೇವೆ.

ಶ್ರೀ ಚಂದ್ರಕಾಂತ ಬೆಲ್ಲದ:- ತಮಗೆ ಹುಬ್ಬಳ್ಳಿ–ಧಾರವಾಡದ ಆರ್ಥಿಕ ಪರಿಸ್ಥಿತಿಯು ಏನಿದೆ ಎಂಬುದು ಗೊತ್ತಿದೆ. ಈಗ ನೀವು ಅವರಿಗೆ ಹಣ ಕೊಟ್ಟರೆ ಕೆಲಸ ಪ್ರಾರಂಭವಾಗುತ್ತದೆಯಾದ ಕಾರಣ ಹಣವನ್ನು ಯಾವಾಗ ಕೊಡುತ್ತೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಇದರ ಬಗ್ಗೆ ವಿಚಾರಣೆ ಮಾಡಿ ಯಾವ ರೀತಿಯ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ವಿಷಯ:- ರಾಜ್ಯಮಟ್ಟದ ನೇಕಾರ ಸಮಿತಿ ಸ್ಥಾಪನೆ.

284 (2058) **ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):-** ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಮಟ್ಟದ ನೇಕಾರರ ಸಮಿತಿಯನ್ನು ಸರ್ಕಾರದವರು ರಚಿಸಿದ್ದಾರೆಯೇ, ಇಲ್ಲದಿದ್ದರೆ ಕಾರಣಗಳೇನು?

ಆ) ನೇಕಾರರ ಸಮಿತಿಯನ್ನು ರಚಿಸಿ ನೇಕಾರರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು):-

ಅ) ನೇಕಾರರ ಸಮಿತಿಯೆಂದು ರಚಿಸಲಾಗಿಲ್ಲ. ಆದರೆ, ಈಗಾಗಲೇ ರಾಜ್ಯ ಮಟ್ಟದ ಕೈಮಗ್ಗ ಸಲಹಾ ಸಮಿತಿಯನ್ನು ರಚಿಸಲಾಗಿದೆ.

ಆ) ಈಗಾಗಲೇ ರಚಿಸಿರುವ ಸಲಹಾ ಸಮಿತಿಯ ಸಲಹೆಯಂತೆ ನೇಕಾರರ ಸಮಸ್ಯೆಗಳನ್ನು ಪರಿಹರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ:- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಮಾನ್ಯ ಸಚಿವರು ಸಲಹಾ ಸಮಿತಿಯನ್ನು ರಚನೆ ಮಾಡಿದ್ದು, ಅದು ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಹೀಗೆ ರಚನೆ ಮಾಡಿರುವುದರ ಬಗ್ಗೆಯೂ ನಮಗ್ಯಾರಿಗೂ ಮಾಹಿತಿಗಳು ಇಲ್ಲ. ಎರಡನೆಯದಾಗಿ ಆ ಸಲಹಾ ಸಮಿತಿಯ ರಚನೆಗೆ ಒಂದೂವರೆ ವರ್ಷಗಳ ಹಿಂದೆ ಪ್ರಯತ್ನಗಳು ನಡೆದು ಮುಖ್ಯವಾಗಿ ನೇಕಾರರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ರಾಜ್ಯಮಟ್ಟದಲ್ಲಿ ಒಂದು ಸಲಹಾ ಸಮಿತಿ ಬೇಕೆಂದು ಹೇಳಿದ್ದರು.